ಕೊಡಬೇಕಾಗಿದೆ ಎಂದು ಪ್ರಶ್ನೆ ಹಾಕಿದ್ದಾರೆ. ಅದಕ್ಕೆ ನಮ್ಮ ಸರ್ಕಾರ ಒಂದು ನಿರ್ಧಾರ ಮಾಡಿತು. ತದನಂತರ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಕೆಲವರು ಶಾಸಕರೂ ಕೂಡ ಈ ರೀತಿ ನೀವು ಗ್ರಾಮ ಅರಣ್ಯ ಸಂಸ್ಥೆಗಳನ್ನು ಮಾಡುವುದರಿಂದ ಈಗ ಇದನ್ನು, ಎಲ್ಲವನ್ನೂ ಕೂಡ ಆ ಒಂದು ಕಾರ್ಪೊರೇಷನ್‌ಗೆ ಟ್ರಾನ್ಸ್‌ಫರ್ ಮಾಡಿದಾಗ ಈ ಸಂಸ್ಥೆಗಳು ಮಾಡುವ ಉದ್ದೇಶ ವಿನಾಗುತ್ತದೆ, ಅದರಿಂದ ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳಿ ನನಗೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೂ ಪತ್ರವನ್ನು ಬರೆದಿರುವುದರಿಂದ ಆ ಒಂದು ಸರ್ಕಾರಿ ಆದೇಶವನ್ನು ನಾವು ಮರು ಪರಿಶೀಲನೆ ಮಾಡುತ್ತಿದ್ದೇವೆ. ಆದರಲ್ಲಿ ಎಷ್ಟು ಭಾಗ ನಾವು ಅರಣ್ಯ ಸಂಸ್ಥೆಗಳಿಗೆ ಕೊಡಬೇಕು, ಉಳಿದಂತಹ ಭಾಗವನ್ನು ಆ ಸಂಸ್ಥೆಗೆ ವರ್ಗಾವಣೆ ಮಾಡುವ ವಿಚಾರ ಕೂಡ ಸರ್ಕಾರದ ಆಲೋಚನೆಯಲ್ಲಿ ಇದೆ. ಅದು ಬಂದ ನಂತರ ಇದು.....

ಶ್ರೀ ಜಿ. ಎಂ. ಕಾನಡೆ.—ಅಧ್ಯಕ್ಷರೇ, ಒಂದು ವಿಚಾರ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಈ ಪ್ರಶ್ನೆಗೆ ೧೫ ನಿಮಿಷ ಆಯಿತು.

ಶ್ರೀ ಜಿ. ಎಂ. ಕಾನಡೆ.—ಬೀಜ ಆರಿಸಿಕೊಂಡು ಹೋಗುವುದನ್ನು ಆ ಸಮಿತಿ ಆಗುವಲ್ಲಿಯವರೆಗಾದರೂ ಸ್ಟಾಪ್ ಮಾಡುವುದಕ್ಕೆ ಹೇಳಿ.

ಶ್ರೀ ಎಂ. ಪಿ. ಕೇಶವಮೂರ್ತಿ.—ನಮ್ಮ ಇಲಾಖೆಯ ಪತಿಯಿಂದ ನಾವು ಆ ಬೀಜವನ್ನು ಕಲೆಕ್ಟ್ ಮಾಡುತ್ತಿದ್ದೇವೆಯೇ ವಿನಃ ಬೇರೆ ಯಾವ ಒಂದು ಸಂಸ್ಥೆಗೂ ನಾವು ಕೊಟ್ಟಿಲ್ಲ. ಅದು ವೇಸ್ಟ್ ಆಗಬಾರದು ಎಂದು ಹೇಳಿ ನಮ್ಮ ಇಲಾಖೆಯ ಅಧಿಕಾರಿಗಳೇ ಅದನ್ನು ಶೇಖರಣೆ ಮಾಡುತ್ತಿದ್ದಾರೆ.

ಹುಳಿಯಾರಿಗೆ ಪ್ರಥಮ ದರ್ಜೆ ಕಾಲೇಜು ಮಂಜೂರಾತಿ

೨೮೧ (೭೧೩) ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಹುಳಿಯಾರಿನಲ್ಲಿ ಪ್ರಥಮ ದರ್ಜೆ ಕಾಲೇಜು ಮಂಜೂರಾಗಿ ಯಶಸ್ವಿಯಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸರ್ಕಾರಿ ಕಾಲೇಜುಗಾಗಿ ದಾನಿಗಳು ತಮ್ಮ ಹೆಸರಿನಲ್ಲಿ ಕಾಲೇಜನ್ನು ಹೆಸರಿಸಲು ಜಮೀನುಗಳನ್ನು ದಾನವಾಗಿ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಆ ಕಾಲೇಜಿಗೆ ಕಟ್ಟಡದ ಅವಶ್ಯಕತೆ ತುಂಬಾ ಇರುವುದರಿಂದ ೧೯೯೪-೯೫ನೇ ಆಯವ್ಯಯದಲ್ಲಿ ಅದನ್ನು ಸೇರಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಸ್. ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು).—

ಅ) ಬಂದಿದೆ.

ಆ) ಬಂದಿದೆ.

ಇ) ೧೯೯೪-೯೫ನೇ ಸಾಲಿಗೆ ಈ ಉದ್ದೇಶಕ್ಕಾಗಿ ಆಯವ್ಯಯದ ಅನುದಾನ ಒದಗಿಸಿದೆ.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಸಮಾಧಾನಕರವಾದ ಉತ್ತರವನ್ನು ಕೊಟ್ಟಿದ್ದಾರೆ. ೧೯೯೪-೯೫ನೇ ಸಾಲಿಗೆ ಈ ಉದ್ದೇಶಕ್ಕಾಗಿ ಆಯವ್ಯಯದಲ್ಲಿ ಅನುದಾನ ಒದಗಿಸಿದೆ ಎಂದು ಹೇಳಿದ್ದಾರೆ. ಇದು ಬಹಳ ಸಂತೋಷ. ತಾವು ಎಷ್ಟು ಅನುದಾನವನ್ನು ಒದಗಿಸಿದ್ದೀರಿ ಎನ್ನುವುದು ಒಂದು. ತಾವು ಕೂಡ ಕಾಲೇಜಿಗೆ ಕೆಲವೇ ದಿವಸಗಳ ಹಿಂದೆ ಬಂದು ನೋಡಿದ್ದೀರಿ. ಅಲ್ಲಿ ಶೀಘ್ರವಾಗಿ ಕಟ್ಟಡ ಆಗಬೇಕೆನ್ನುವುದು ನಿಮಗೇ ಗೊತ್ತಿರತಕ್ಕ ವಿಷಯ. ಮತ್ತು ಜೊತೆಗೆ HEC ಅನ್ನು additional ಆಗಿ ತಾವು ಕೊಡುತ್ತಾ ಇರತಕ್ಕ ಭರವಸೆಯನ್ನು ಕೊಟ್ಟು ಬಂದಿದ್ದೀರಿ. ಅದನ್ನು ಕೊಟ್ಟಮೇಲೆ ಕಟ್ಟಡದ ಅವಶ್ಯಕತೆ ಅಂತೂ ಬಹಳ ತೀವ್ರವಾಗಿ ಬೇಕಾಗಿರುತ್ತದೆ. ಅದಕ್ಕೆ ಒಂದೇ ಒಂದು ನಾನು ತಮಗೆ ಕೇಳುವುದು. ಒನ್‌ಥರ್ಡ್ ಗ್ರಾಂಟ್ ಇಲ್ಲದೇ ಇವತ್ತು ಕಟ್ಟಡವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ, ಆಡಳಿತಾತ್ಮಕ ಮಂಜೂರಾತಿ ಸಿಗುವುದಿಲ್ಲ.

ಅದಕ್ಕೋಸ್ಕರ ನಾಳೆ ಇದು ಆದಮೇಲೆ ಮುಂದಿನ ವರ್ಷಕ್ಕಾದರೂ ೧೯೯೫-೯೫ನೇ ಸಾಲಿನಲ್ಲಿ ಖಂಡಿತ ವಾಗಿಯೂ ಒನ್‌ಥರ್ಡ್ ಗ್ರಾಂಟನ್ನು ಪ್ರೊವೈಡ್ ಮಾಡೇಮಾಡುತ್ತೇನೆ ಎಂಬ ಸ್ಪಷ್ಟವಾದಂಥ ಆಶ್ವಾಸನೆ

ಓ-೧೫ ಪಿ. ಎಂ.

ಯನ್ನು ತಾವು ಕೊಡಬೇಕು. ಮತ್ತು ಈಗ ಇಟ್ಟಿರತಕ್ಕ ಹಣ ಎಷ್ಟು, ಮೂರನೇ ಒಂದು ಜಾಸ್ತಿ ಆಗುವಂಥ ಸಂದರ್ಭದಲ್ಲಿ ತಾವು ಏನು ಮಾಡುತ್ತೀರಿ ?

ಶ್ರೀ ಎಸ್. ಎಂ. ಯಾಹ್ಯಾ,—ಇದು ೧೯೯೫-೯೬ರಲ್ಲಿ ಸ್ಥಾಪನೆಯಾಗಿದೆ. ಇದಕ್ಕೆ ಯಾರೋ ದಾನಿಗಳು ಆರು ಎಕರೆ ಭೂಮಿಯನ್ನೂ ಕೊಟ್ಟಿದ್ದಾರೆ. ಶ್ರೀ ಬಸಪ್ಪ ಮಲ್ಲಪ್ಪ ಶ್ರೀನಿವಾಸಶೆಟ್ಟಿ ಅವರ ಹೆಸರಿನಲ್ಲಿಯೇ ಕಾಲೇಜು ಇಡುವುದಕ್ಕೆ ನಾವು ತಯಾರಿದ್ದೇವೆ. ಇದುವರೆಗೂ ಹೆಚ್ಚು ಹಣವನ್ನು ಒದಗಿಸಿದ್ದೆವು. ಆದರೆ, ಇದು ನಮ್ಮ ಪೊಸಿಷನ್‌ಗೆ ಬರಲಿಲ್ಲ.

ಶ್ರೀ ಟಿ. ಬಿ. ಜಯಚಂದ್ರ.—ರಿಜಿಸ್ಟರ್ಡ್ ಮಾಡಿಸಿಕೊಟ್ಟಿದ್ದೇವೆ, ಡಾಕ್ಯುಮೆಂಟ್ಸ್‌ಕೂಡ ಕಳುಹಿಸಿ ಕೊಟ್ಟಿದ್ದೇವೆ.

ಶ್ರೀ ಎಸ್. ಎಂ. ಯಾಹ್ಯಾ.—ನಿನ್ನೆ, ಮೊನ್ನೆ ಮಾತು ಹೇಳಬೇಡಿ, ಆ ವಿಷಯ ನನಗೆ ಗೊತ್ತಿಲ್ಲ. ನಾನು ಒಂದು ವಾರದ ಮಾತು ಹೇಳುತ್ತಿದ್ದೇನೆ. ಇವತ್ತಿನವರೆಗೆ ಪೊಸಿಷನ್ ಬಂದಿಲ್ಲ. ಪೊಸಿಷನ್ ಬಂದಮೇಲೆ, ಪ್ಲಾನ್, ಎಸ್ಟಿಮೇಟ್ ಮಾಡಬೇಕಾಗುತ್ತದೆ. ಪ್ಲಾನ್ ಎಸ್ಟಿಮೇಟ್ ಇದುವರೆಗೆ ಆಗದ ಕಾರಣ ಈ ಬಜೆಟ್‌ನಲ್ಲಿ ಹೆಚ್ಚು ಹಣವನ್ನು ಇಡುವುದಕ್ಕೆ ಸಾಧ್ಯವಾಗಲಿಲ್ಲ. ನಾಮಿನಲ್ ಆಗಿ ಎರಡು ಲಕ್ಷ ಮಾತ್ರ ಇಟ್ಟಿದ್ದೇವೆ. ಪ್ಲಾನ್ ಎಸ್ಟಿಮೇಟ್ ಆದಮೇಲೆ, ಮೂರನೇ ಒಂದು ಇರಬೇಕೆಂದೇನೂ ಇಲ್ಲ, ಮೂರನೇ ಒಂದು ಬೇಕಾದರೆ, ಮೂರನೇ ಒಂದರಷ್ಟೇ ಮಾಡಿಕೊಟ್ಟು, ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಒದಗಿಸಿಕೊಡುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ.—ಧನ್ಯವಾದಗಳು. ಹಿಂದಿನ ವರ್ಷವೂ ಯೂನಿವರ್ಸಿಟಿಗೆ ಪ್ರಪೋಸಲ್ ಹೋಗಿದೆ. ಆದ್ದರಿಂದ, ಈ ವರ್ಷವಾದರೂ ಕೊಡುತ್ತೇವೆ ಎನ್ನುವ ಬಗ್ಗೆ ದಯವಿಟ್ಟು ಮಾಡಿ ಆಸಕ್ತಿ ವಹಿಸಿ, ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್. ಎಂ. ಯಾಹ್ಯಾ.—ವಿಚಾರ ಮಾಡುತ್ತೇನೆ.

ಶಿಕ್ಷಣ ಇಲಾಖೆಗಳ ವಿಂಗಡಣೆ

೨೮೨ (೭೩೦) ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ ಇಲಾಖೆಗಳನ್ನು ಪುನರ್ ವಿಂಗಡಣೆ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ಆ ಪ್ರಸ್ತಾವನೆ ಯಾವ ಹಂತದಲ್ಲಿದೆ ?

ಇ) ಮಂಡ್ಯ ಜಿಲ್ಲೆಯಲ್ಲಿನ ವಿದ್ಯಾಮಟ್ಟವನ್ನು ಸುಧಾರಿಸಲು ವಿಶೇಷ ಯೋಜನೆ ಏನಾದರೂ ಅನುಷ್ಠಾನಕ್ಕೆ ಬರಲಿದೆಯೇ ?

ಶ್ರೀಮತಿ ನಾಗಮ್ಮ ಪಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವೆಯರು),—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ವಿಶ್ವಬ್ಯಾಂಕ್ ನೆರವಿನ "ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು" ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಜಾರಿಗೆ ತರಲು ಉದ್ದೇಶಿಸಿದ್ದು, ಆದರಲ್ಲಿ ಮಂಡ್ಯ ಜಿಲ್ಲೆಯೂ ಒಂದಾಗಿದೆ.